ನೀವು ಕೇಳಿದಿರಿ?

ಮಲ್ಲನಗೌಡ ಗಂ. ಪಾಟೀಲ, ರಾಮದುರ್ಗ

ಮೈ ತುಂಬಾ ಬಟ್ಟೆ ತೊಡುವ ಮಹಿಳೆಗೂ, ತುಂಡುಡುಗೆ ತೊಡುವ ಮಹಿಳೆಗೂ ಏನು ವ್ಯತ್ಯಾಸ?

ಕ್ಷಮಿಸಿ; ವ್ಯತ್ಯಾಸವಿರುವುದು ಮಹಿಳೆಯರಲ್ಲಲ್ಲ, ನೋಡುಗರ ಕಾಮಾಲೆ ಕಣ್ಣಿನಲ್ಲಿ.

ಗುಡಿಬಂಡೆ ಪಾರ್ಥಸಾರಥಿ, ಬಾಗೇಪಲ್ಲಿ

ಗಾಳಕ್ಕೆ ಸಿಕ್ಕ ಮೀನಿಗೂ, ಹೆಣ್ಣಿನ ಮೋಹಕ್ಕೆ ಸಿಲುಕಿದ ಗಂಡಿಗೂ ಏನಾದರೂ ಅಂತರವಿದೆಯೆ?

ಮೀನಿಗೆ ಕೊಂಚವಾದರೂ ಬೆಲೆ ದೊರಕುತ್ತದೆ.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

ನಾರಿ ಮುನಿದರೆ ಮಾರಿ; ಒಲಿದರೆ?

ಕೇಳಿದ್ದೆಲ್ಲವನ್ನೂ ಕೊಡಿಸಲು ಇರುವುದೆಲ್ಲಾ ಮಾರಿ.

ಫಾಲನೇತ್ರ ಜಿ. ಸಜ್ಜನ, ಶಿರಸಿ

ಇತ್ತೀಚೆಗೆ ತೊಂಡೆಹಣ್ಣು ಅಪರೂಪವಾಗಿದೆಯಲ್ಲಾ....?

ಇಂದಿನ ಪಾರ್ಲರಾಲಂಕೃತ ತುಟಿಗಳನ್ನು ಕಂಡು ಕೀಳರಿಮೆಯಿಂದ ಕಾಣೆಯಾಗಿದೆಯಂತೆ.

ವಸಂತರಾವ್ ಕೊರತಿ, ಬೆಂಗಳೂರು

ಹೆಣ್ಣು, ಹೊನ್ನು, ಮಣ್ಣು; ಈ ಮೂರರಲ್ಲಿ ಯಾವುದು ಹೆಚ್ಚು ಅಪಾಯಕಾರಿ?

ಗೆಸ್ಟ್

ಹಂಪೆಯನ್ನು ನೋಡಿದರೆ ತಿಳಿಯುತ್ತಲ್ಲ; ಹೆಣ್ಣು, ಹೊನ್ನುಗಳ ವೈಭವವನ್ನೇ ಮುಕ್ಕಿ ಕೂರುವ ಮಣ್ಣು.

ವಿ.ಎಸ್. ಹಿಂದೂಪುರ, ಬಳ್ಳಾರಿ

ನಿಮಗೆ ಎಂದಾದರೂ ಮೊಸರಿನಲ್ಲಿ ಕಲ್ಲು ಸಿಕ್ಕಿದೆಯಾ?

ಹೂಂ. ಹೊಟೇಲ್‌ನಿಂದ ತಂದ ತೈರೊಡೆ ಇದ್ದದ್ದೇ ಗೋರ್ಕಲ್ಲ ಮೇಲೆ ತೈರೆರೆದಂತೆ!

ಉಷಾ ಸೋಗಲ್, ಬೆಂಗಳೂರು

ತ್ರಿಮೂರ್ತಿಗಳಲ್ಲಿ ಬ್ರಹ್ಮನಿಗೇಕೆ ಮುದುಕನ ಪಟ್ಟ?

ಹಾಗೇನಿಲ್ಲ; ಇಂದಿನ ಸಾಫ್ಟ್‌ವೇರ್‌ನವರಂತೆ 24/7 ಕೆಲಸ ಮಾಡುವುದರಿಂದ, ಪಾಪ! ವಯಸ್ಸಾದಂತೆ ಕಾಣುವನಷ್ಟೆ.

ಬಿ.ಆರ್. ಸುರೇಶ್, ಶಿವಮೊಗ್ಗ

ರಸ್ತೆ ಅಪಘಾತದಲ್ಲಿ ವ್ಯಕ್ತಿ ಸಾವು ಬದುಕಿನ ಮಧ್ಯೆ ಒದ್ದಾಡುತ್ತಿದ್ದರೂ ಯಾರೂ ರಕ್ಷಿಸಲು ಧಾವಿಸುವುದಿಲ್ಲವಲ್ಲಾ, ಏಕೆ?

ಹಾಗೆಲ್ಲ ಹೋದ್ರೆ ಸೆಲ್ಫಿ ತೊಗೊಂಡು ಅಪ್ಲೋಡ್ ಮಾಡುವಂಥ ಇಂಪಾರ್ಟೆಂಟ್ ಕೆಲಸ ಮಾಡಕ್ಕಾಗಲ್ಲ.

ವಿ.ಹೇಮಂತಕುಮಾರ್, ಬೆಂಗಳೂರು

ಕೀಳಲು ಪ್ರಚೋದನೆ ನೀಡುತ್ತೆ ಅನ್ನೋದು ಹೂವಿನ ಸೌಂದರ್ಯದ ತಪ್ಪಾ?

ಅನೇಕರು ಸೆಲ್ಫಿ ವಿತ್ ಫ್ಲವರ್‌ಗೆ ಸಂತೃಪ್ತರಾಗುತ್ತಾರೆ. ಕೀಳು ಮನ ಮಾತ್ರ ಕೀಳು ಅನ್ನತ್ತೆ, ಹೂ ಅಲ್ಲ.

ಸವಿತಾ ರವಿ ಸುಬ್ಬಟ್ಟಿ, ಬನಹಟ್ಟಿ

ಸ್ವರ್ಗಕ್ಕೆ ಮೂರೇ ಗೇಣು ಎನ್ನುತ್ತಾರೆ. 4, 5 ಗೇಣುಗಳೆಂದೂ ಅನ್ನಬಹುದಲ್ಲವೆ?

ನೆತ್ತಿಯಿಂದ 3 ಗೇಣಿನೊಳಗೇ ಆನಂದಾಸ್ವಾದದ ಸರ್ವಾಂಗಗಳೂ ಇವೆ. ಮಿಕ್ಕ ಗೇಣುಗಳು ನಗಣ್ಯ.

ರತ್ನಜ, ಮೈಸೂರು

ವಿಧಾನಸೌಧದ ಮೇಲೆ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಬರೆಸಿದವರು ಯಾರು?

ಕೆಲಸ ಮಾಡುವುದಕ್ಕೆ ಅಲ್ಲಿರುವವರನ್ನು ನಂಬಿದರೆ ದೇವರೇ ಗತಿ ಎಂದು ಮೊದಲೇ ತಿಳಿದವರು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಗಿಳಿಗೆ ಮಾತು ಚಂದ; ನವಿಲಿಗೆ ನಾಟ್ಯ ಚಂದ. ರಾಜಕಾರಣಿಗೆ?

ಚುನಾವಣೆ ಸಮೀಪಿಸುತ್ತಿದೆ. ಸಮರ್ಪಿಸಿ ಚಂದಾ....!

ಬಿ.ಎನ್. ಸೊಲ್ಲಾಪುರ, ಬೀದರ

ಕುಟುಂಬದಲ್ಲಿ ಕೂಡಿ ಬಾಳಿದರೆ ಸ್ವರ್ಗಸುಖ. ಕೂಡದೆ ಬಾಳಿದರೆ?

ಮನದಲ್ಲಿ ಏನೇನೋ ಗುಣಾಕಾರ; ಆಸ್ತಿಯ ಭಾಗಾಕಾರ; ಕಡೆಗೆ ತಲೆಯ ಮೇಲೆ ಚೌಕ.

ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

ಮೈಮೇಲೆ ಬಟ್ಟೆ ಹಾಕಿಕೊಳ್ಳದಿದ್ದರೆ ನಗುತ್ತಾರೆ. ತಲೆಯ ಮೇಲೆ ವಿಗ್ ಹಾಕಿಕೊಂಡರೆ ನಗುತ್ತಾರೆ. ಏಕೀ ತಾರತಮ್ಯ?

ತಾರತಮ್ಯ? ಎರಡೂ ಸಮ್ಮತ ಸಂಸ್ಕೃತಿಯ ವಿಕೃತಿಯೇ. ನಗ್ನರಾದರೂ ನಗದಿರುವ ಸ್ಥಳಗಳಿವೆ – ನ್ಯೂಡ್ ಕ್ಲಬ್, ಮಸಣ!

ಎ. ಕೃಷ್ಣಾನಂದ ಶೆಟ್ಟಿ, ಮುಲ್ಕಿ

ಮೌಲ್ಯಕ್ಕೂ ಅಪಮೌಲ್ಯಕ್ಕೂ ಏನು ವ್ಯತ್ಯಾಸ ಸ್ವಾಮಿ?

ಪ್ರಧಾನಿ ಮೋದಿಯವರ ನವೆಂಬರ್ ಎಂಟರ ಭಾಷಣ.

ಪಿ. ಜೆ. ರಾಘವೇಂದ್ರ, ಮೈಸೂರು

ರಾಜಕಾರಣಿಗಳನ್ನು ನಂಬುವುದು ಮೂಢನಂಬಿಕೆಯೆ?

ಮೂಢರನ್ನು ನಂಬುವುದು ಮೂಢನಂಬಿಕೆಯೇ.

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

ತಂಪಾದ ಪಾನೀಯಗಳಲ್ಲಿ ಶ್ರೇಷ್ಠವಾದ ಪಾನೀಯ ಯಾವುದು?



ಬೇಸಿಗೆಯಲ್ಲಿ ಹಿಮ ಕರಗಿ ಹರಿದು ಬರುವ ಥಣ್ಣನೆಯ ಗಂಗಾನದಿಯ ನೀರು.

ಆರತಿ ಘಟಿಕಾರ್, ದುಬೈ

ನಾವು ಇಷ್ಟ ಪಟ್ಟಿದ್ದೆಲ್ಲ ಸಿಗುವುದಿಲ್ಲ. ನಮಗೆ ಸಿಕ್ಕಿದ್ದನ್ನು ಇಷ್ಟ ಪಡುವುದಿಲ್ಲ. ಹೀಗೇಕೆ?

ಇರಬೇಕಾದ್ದೇ ಹಾಗೆ. ಅತೃಪ್ತಿಯೇ ಆವಿಷ್ಕಾರದ ಮೂಲ.

ವಿ. ಹಮೀದ್, ವಿಟ್ಲ

ಭ್ರಷ್ಟಾಚಾರ ಕೇಸುಗಳಿಲ್ಲದ ರಾಜಕಾರಣಿಗಳು ಎಲ್ಲಿ ಕಾಣಸಿಗುತ್ತಾರೆ?

ಸುಮಾರು ಐವತ್ತು ವರ್ಷ ಹಳೆಯದಾದ ಗೋರಿಗಳಲ್ಲಿ.

■ ರಾಮ್